Article Date	Headline / Summary	Publication
25 Oct 2026	Choosing the right insurance is important when purchasing a vehicle	Sanjevani (Kannada)

ವಾಹನ ಖರೀದಿಸುವಾಗ ಸೂಕ್ತ ವಿಮೆ ಆಯ್ಕೆ ಮುಖ್ಯ

ಬೆಂಗಳೂರು.ಅ25: ಹಬ್ಬದ ಸೀಸನ್‌ನಲ್ಲಿ ಹೊಸ ಕಾರು ಅಥವಾ ದ್ವಿಚಕ್ರ ವಾಹನ ಖರೀದಿಸುವಾಗ ಆಕರ್ಷಕ ಕೊಡುಗೆಗಳ ಜೊತೆಗೆ ಸೂಕ್ತ ಮೋಟಾರ್ ವಿಮೆ ಆಯ್ಕೆಗೂ ಆದ್ಯತೆ ನೀಡಬೇಕು ಎಂದು ಬಜಾಜ್ ಜನರಲ್ ಇನ್ಶೂರೆನ್ಸ್‌ನ ಚೀಫ್ ಡಿಸ್ಟ್ರಿಬ್ಯೂಷನ್ ಆಫೀಸರ್ (ರಿಟೇಲ್ ಬಿಸಿನೆಸ್) ರಾಕೇಶ್ ಕೌಲ್ ಸಲಹೆ ನೀಡಿದ್ದಾರೆ.

ಮೋಟಾರ್ ವಿಮೆ ಅಪಘಾತ, ವಾಹನ ಕಳ್ಳತನ, ಬೆಂಕಿ ಹಾಗೂ ನೈಸರ್ಗಿಕ ವಿಕೋಪಗಳಿಂದ ಉಂಟಾಗುವ ಆರ್ಥಿಕ ನಷ್ಟವನ್ನು ತಗ್ಗಿಸಲು ನೆರವಾಗುತ್ತದೆ. ಕಾನೂನಿನ ಪ್ರಕಾರ ಥರ್ಡ್ ಪಾರ್ಟಿ ವಿಮೆ ಕಡ್ಡಾಯವಾಗಿದ್ದು, ಸಮಗ್ರ ವಿಮೆ ವಾಹನಕ್ಕೆ ಆಗುವ ಹಾನಿಗೂ ರಕ್ಷಣೆ ಒದಗಿಸುತ್ತದೆ.

ವಿಮೆ ಆಯ್ಕೆ ಮಾಡುವಾಗ ಪ್ರೀಮಿಯಂ ಮೊತ್ತವೊಂದನ್ನೇ ಪರಿಗಣಿಸದೆ, ಪಾಲಿಸಿಯ ಕವರೇಜ್, ಹೊರಗಿಡಲಾದ ಅಂಶಗಳು, ಕ್ಲೇಮ್ ಪ್ರಕ್ರಿಯೆ ಮತ್ತು ಕ್ಯಾಶ್‌ಲೆಸ್ ಗ್ಯಾರೇಜ್‌ಗಳ ಸೌಲಭ್ಯವನ್ನು ಹೋಲಿಕೆ ಮಾಡಬೇಕು. ವಾಹನದ ಪ್ರಸ್ತುತ ಮೌಲ್ಯವನ್ನು ಆಧರಿಸುವ ಇನ್ಬಿಲ್ಟ್ ಡಿಪ್ರೀಷಿಯೇಷನ್ ವ್ಯಾಲ್ಯೂ (ಐಡಿವಿ) ಕೂಡ ಪ್ರಮುಖವಾಗಿದೆ.

ಶೂನ್ಯ ಸವಕಳಿ, ಎಂಜಿನ್ ರಕ್ಷಣೆ, ರಸ್ತೆಬದಿಯ ನೆರವು, ರಿಟರ್ನ್ ಟು ಇನ್ವಾಯ್ಸ್ ಮತ್ತು ಕನ್ಸ್ಯೂಮೆಬಲ್ಸ್ ಕವರ್‌ನಂತಹ ಆ?ಯಡ್‌ಆನ್‌ಗಳು ಹೆಚ್ಚುವರಿ ರಕ್ಷಣೆ ನೀಡಬಹುದು. ಪ್ರವಾಹದ

ವಾಹನದ ಬಳಕೆ, ವಾಸಿಸುವ ಪ್ರದೇಶ ಮತ್ತು ವೈಯಕ್ತಿಕ ಅಗತ್ಯಗಳಿಗೆ ತಕ್ಕ ವಿಮೆ ಆಯ್ಕೆ ಮಾಡುವುದು ಮುಖ್ಯ. ಪಾಲಿಸಿಯ ನಿಯಮಗಳು ಮತ್ತು ಷರತ್ತುಗಳನ್ನು ತಿಳಿದುಕೊಂಡು ಸೂಕ್ತ ಕವರ್ ಆರಿಸುವುದರಿಂದ ಅನಿರೀಕ್ಷಿತ ಸಂದರ್ಭಗಳಲ್ಲಿ ಆರ್ಥಿಕ ನಷ್ಟವನ್ನು ಕಡಿಮೆ ಮಾಡಿಕೊಳ್ಳಬಹುದು ಎಂದು ಕೌಲ್ ತಿಳಿಸಿದ್ದಾರೆ.